ಗೌತಮನೆನ್ನುತ್ತಿದ್ದರು. ಇಡೀ ಕುಟುಂಬದ ಹೆಸರೇ ಗೌತಮ ಎಂದಾಗಿದ್ದರೂ ಯಾರಿಗೂ ಹೆಚ್ಚಾಗಿ ಲೇಪಿಸದೇ ನಮ್ಮಿಬ್ಬರನ್ನೇ ಆ ಹೆಸರುಗಳಿಂದ ಕರೆಯುತ್ತಿದ್ದುದು ವಿಶೇಷವಾಗಿತ್ತು. ಅನೇಕ ಸಲ ಸಿದ್ದಾರ್ಥನ ಹೆಸರನ್ನೇ ಮರೆತು ಗೌತಮ ಎಂದೇ ಕರೆದದ್ದಿದೆ. ಅಂದರೆ ಅಷ್ಟರಮಟ್ಟಿಗೆ ಅವನ ಮತ್ತು ನನ್ನ ನಡುವೆ ಭಾವನಾತ್ಮಕ ಸಂಬಂಧ ಏರ್ಪಟ್ಟಿತ್ತು.

ಹಾಗಂತ ಶುದ್ಧೋದನರಿಗೇನೂ ಆತನ ಬಗ್ಗೆ ಪ್ರೀತಿ ಕಡಿಮೆ ಇರಲಿಲ್ಲ. ನನ್ನ ಬಗ್ಗೆಗಿಂತಲೂ ಒಂದು ಕೈ ಮೇಲಾಗಿಯೇ ಕಾಳಜಿ ವಹಿಸುತ್ತಿದ್ದರು. ಆತನಿಗೆ ನಾಲ್ಕೈದು ವರ್ಷಗಳಾಗುವವರೆಗೆ ಆತನ ಎಲ್ಲಾ ಬಾಲಲೀಲೆಗಳನ್ನು ಸಂಭ್ರಮಿಸುತ್ತಲೇ, ಅವರ ತಮ್ಮ ಶುಕ್ಲೋಧನನ ಮಗ ಮಹಾನಾಮ, ತಂಗಿ ಅಮಿತಾಳ ಮಗ ದೇವದತ್ತರೊಂದಿಗೆ ವಿದ್ಯಾಭ್ಯಾಸಕ್ಕೆ ತೊಡಗಿಸಿದರು. ಆ ಮೊದಲು ಅಕ್ಕ ಮಾಯಾದೇವಿಯ ಕನಸನ್ನು ಅರ್ಥೈಸಲು ಕರೆಸಿದ್ದ ಎಂಟು ಜನ ಬ್ರಾಹ್ಮಣರನ್ನೂ ಪ್ರಥಮ ಗುರುಗಳನ್ನಾಗಿ ನೇಮಿಸಲಾಯಿತು. ಅವರು ಸರತಿಯ ಮೇಲೆ ಮನೆಗೇ ಬಂದು ಪಾಠ ಮಾಡುತ್ತಿದ್ದರು. ಇವರ ಜೊತೆಗೆ ಅರಮನೆಯ ಜೊತೆ ಒಡನಾಟವಿದ್ದ ಮಂತ್ರಿ ಮಹೋದಯರ ಇನ್ನೊಂದಷ್ಟು ಮಕ್ಕಳನ್ನೂ ವಿದ್ಯಾಭ್ಯಾಸದಲ್ಲಿ ತೊಡಗಿಸಿದರು. ಅವರು ಮನೆಯಲ್ಲೇ ಇದ್ದು ಕಲಿಯುವ ಪ್ರಾಥಮಿಕ ಶಿಕ್ಷಣವನ್ನು ನೀಡಿದ ನಂತರ ವೇದ, ಉಪನಿಷತ್ತು, ವ್ಯಾಕರಣಗಳ ಅಧ್ಯಯನಕ್ಕಾಗಿ ತತ್ವಶಾಸ್ತ್ರಜ್ಞ ಸಬ್ಬಮಿತ್ತನಲ್ಲಿಗೆ ಕಳಿಸಿಕೊಡಲು ತೀರ್ಮಾನಿಸಲಾಯಿತು. ಸ್ವಲ್ಪ ಕಟ್ಟುನಿಟ್ಟಾದ ಶಿಕ್ಷಣಕ್ಕೆ ಹೆಸರಾದುದರಿಂದ ಅರಮನೆಗೆ ಬಂದು ಪೋಷಕರ ಎದುರಿಗೇ ಶಿಕ್ಷಣವನ್ನು ನೀಡಲು ಅವರು ನಿರಾಕರಿಸಿದ್ದರು. ಕೊನೆಗೆ ಸಬ್ಬಮಿತ್ತನಿದ್ದ ಉದ್ದಿಕಕ್ಕೇ ಹೋಗಿ, ಸುವರ್ಣ ಕಲಶದಿಂದ ಗಂಗಾಜಲವನ್ನು ವಿಧಿವತ್ತಾಗಿ ಧಾರೆಯೆರೆಯುವುದರ ಮೂಲಕ ಮೂವರೂ ಮಕ್ಕಳನ್ನು ಅವರ ಸುಪರ್ದಿಗೆ ವಹಿಸಿಕೊಡಲಾಯಿತು.

ಸಿದ್ಧಾರ್ಥ ಮನೆಯಿಂದ ಕೆಲಕಾಲ ದೂರವಾದ ನಂತರವೇ ನಾನು ಶುದ್ಧೋದನರಲ್ಲಿ ಸಾಂಸಾರಿಕ ಜೀವನ ಸಾಗಿಸಲು ಸಾಧ್ಯವಾದದ್ದು. ಅಲ್ಲಿಯವರೆಗೆ ಆತ ನನ್ನನ್ನು ಎಲ್ಲಿ ಒಂಟಿಯಾಗಿರಲು ಬಿಟ್ಟಿದ್ದ! ರಾತ್ರಿಯಂತೂ ನನ್ನ ಮೇಲೆ ಕಾಲು ಹಾಕದೇ ಆತನಿಗೆ ನಿದ್ದೆ ಬಂದದ್ದೇ ಇಲ್ಲ. ಒಂದು ವೇಳೆ ಮೆಲ್ಲಗೆ ಕಾಲು ತೆಗೆದರಂತೂ ಕ್ಷಣದಲ್ಲೇ ಎದ್ದುಬಿಡುತ್ತಿದ್ದ. ತಾಯಿ ಇಲ್ಲದ ಕಂದನಿಗೆ ಅಭದ್ರತೆಯ ಭಾವ ಮೂಡಬಾರದೆಂದು ನಾನು ಎಂದೂ ಆತನ ಇಚ್ಛೆಗೆ ವಿರುದ್ಧವಾಗಿ ನಡೆದುಕೊಂಡದ್ದಿಲ್ಲ. ಈ ಕಾಲದಲ್ಲೇ ನನ್ನ ಹೊಟ್ಟೆಯಲ್ಲೂ ಭ್ರೂಣವೊಂದು ಚಿಗುರಿದ್ದು. ಸ್ವತಃ ತಾಯಿಯ ಸುಖವೇನೆಂದು ಅನುಭವಿಸಿದ್ದು. ಆಗಲೇ ಸ್ವಂತ ಹೊಟ್ಟೆಯಲ್ಲಿ ಕರುಳಬಳ್ಳಿಯ ಸಂಬಂಧ ಏರ್ಪಡಿಸಿಕೊಂಡು ಹುಟ್ಟಿದ ಮಕ್ಕಳಿಗೂ ಪರರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೂ ಇರುವ ಪ್ರೀತಿಯ ವ್ಯತ್ಯಾಸದ ಅರಿವಾದದ್ದು. ನಾನು ಎಷ್ಟೇ ಕಾಳಜಿಯಿಂದ ಸಿದ್ಧಾರ್ಥನನ್ನು ಕಾಪಿಟ್ಟಿದ್ದರೂ ಅದು ಎರಡನೇ ದರ್ಜೆಯ ಕರುಳು ಸಂಬಂಧವೆಂದು ಹೇಳದಿದ್ದರೆ ನನ್ನ ಪ್ರಾಮಾಣಿಕತೆಗೇ ನಾನು ದ್ರೋಹ ಬಗೆದಂತೆ. ಆದರೂ ಸಿದ್ಧಾರ್ಥ ಮತ್ತು ನಂದನನ ನಡುವೆ ಯಾವುದೇ ಪ್ರೀತಿಯ ವ್ಯತ್ಯಾಸವೂ ಯಾರಿಗೂ ಗೊತ್ತಾಗದಂತೆ, ಇಬ್ಬರೂ ನನ್ನ ಎರಡು ಕಣ್ಣುಗಳಂತೆಯೇ ಭಾವಿಸುತ್ತಿದ್ದೆ.

ಸಿದ್ಧಾರ್ಥ, ಮಹಾನಾಮ ಮತ್ತು ದೇವದತ್ತ – ಮೂವರೂ ಎಲ್ಲ ತಾತ್ವಿಕ ಸಿದ್ಧಾಂತಗಳನ್ನು ಕಲಿತ ನಂತರ ಕೆಲದಿನ ಭಾರದ್ವಾಜರಲ್ಲಿ ಯೋಗ ಮತ್ತು ಧ್ಯಾನವನ್ನೂ ಕಲಿತರು. ಹೀಗೆ ಬೌದ್ಧಿಕ ಶಿಕ್ಷಣ ದೊರೆತ ನಂತರ ಕ್ಷತ್ರಿಯರಿಗೆ ಬೇಕಾದ ದೈಹಿಕ ಶಿಕ್ಷಣವನ್ನೂ ನೀಡಲಾಯಿತು. ಮಲ್ಲಯುದ್ಧ, ಕತ್ತಿವರಸೆ, ಬಿಲ್ವಿದ್ಯೆ, ಗದಾಪ್ರಯೋಗಗಳಲ್ಲೂ ಪರಿಣತಿಯನ್ನು ಪಡೆದರು. ಆದರೆ ಸಿದ್ಧಾರ್ಥ, ಮಹಾನಾಮ–ದೇವದತ್ತರಿಗಿಂತ ಎಲ್ಲದರಲ್ಲೂ ಅಜಗಜಾಂತರದಲ್ಲಿ ಶಿಕ್ಷಿತನಾಗಿದ್ದಾನೆ ಎಂದು ಎಲ್ಲರೂ ಶಿಫಾರಸ್ಸು ಮಾಡುತ್ತಿದ್ದಾಗ ನನ್ನೆದೆ ಅಭಿಮಾನದಿಂದ ಉಬ್ಬಿಹೋಗುತ್ತಿತ್ತು.

ಅಂದು ವಪ್ರಮಂಗಳವೆಂಬ ಹಬ್ಬವನ್ನು ಗೋತಮರು ಆಚರಿಸುವ ದಿನ. ಭೂಮಿಯನ್ನೆಲ್ಲ ಒಪ್ಪಮಾಡಿದ ನಂತರ ಬಿತ್ತನೆ ಮಾಡುವ ದಿನವನ್ನು ಹೀಗೆ ಹಬ್ಬದಂತೆ ಸಂತಸದಿಂದ ಆಚರಿಸಲಾಗುತ್ತಿತ್ತು. ಅತ್ಯಂತ ವಿಶಾಲವಾದ ಭೂಮಿ ಶುದ್ಧೋದನರಿಗೆ ಅವರ ತಂದೆ ಸಿನಹು ಶಾಕ್ಯರಿಂದ ಬಂದಿತ್ತು. ಇಡೀ ಪ್ರಾಂತ್ಯದಲ್ಲೇ ಅತ್ಯಂತ ಹೆಚ್ಚಿನ ಭೂಮಿಯನ್ನು ಹೊಂದಿರುವವರೆಂಬ ಕಾರಣಕ್ಕೆ ತಾನೇ ಜನಸಂಘದ ಮುಖ್ಯಸ್ಥರಾಗಿ ಪ್ರಾಂತ್ಯಾಧಿಕಾರ ದೊರೆತು ರಾಜನ್ಯರೆನಿಸಿಕೊಂಡಿರುವುದು? ಅದರಲ್ಲಿ ಅಣ್ಣ ತಮ್ಮಂದಿರೈವರೂ ಸೇರಿ ಅಪಾರವಾದ ಬೆಳೆ ಬೆಳೆಯುತ್ತಿದ್ದರು. ನೆಲಕ್ಕೆ ಬೀಜ ಬಿತ್ತುವುದೆಂಬುದೇ ರೈತರಿಗೆ ಒಂದು ಸಂಭ್ರಮ ತಾನೇ. ಅಂದು ನಮ್ಮ ಪರಿವಾರದವರೆಲ್ಲ ಜಮೀನಿಗೆ ತೆರಳಿದ್ದೆವು. ನೂರು ಜೊತೆ ಎತ್ತುಗಳು ಬಿತ್ತನೆಯಲ್ಲಿ ತೊಡಗಿದ್ದವು. ನೂರಾರು ರೈತಾಪಿ ಆಳುಗಳು ಹತ್ತಾರು ಕಡೆ ಗುಂಪು ಗುಂಪಾಗಿ ವಿಧ ವಿಧದ ಕಾಳುಗಳನ್ನು ಬಿತ್ತನೆ ಮಾಡುತ್ತಿದ್ದರು. ಕುದುರೆಯೇರಿದ್ದ ಶುದ್ಧೋದನ ಅಲ್ಲಲ್ಲಿಗೆ ಭೇಟಿ ನೀಡಿ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಅಲ್ಲಲ್ಲಿ ಇದ್ದ ದೊಡ್ಡ ದೊಡ್ಡ ಮರಗಳಡಿ ಪರಿವಾರದ ನಾವುಗಳು ಬೀಡುಬಿಟ್ಟಿದ್ದೆವು. ಐವರು ಅಣ್ಣತಮ್ಮಂದಿರು, ಅವರವರ ಪತ್ನಿ–ಮಕ್ಕಳುಗಳು, ಜೊತೆಗೆ ಇಬ್ಬರು ತಂಗಿಯರ ಸಂಸಾರವೂ ನಮ್ಮೊಡನೆ ಸಂಭ್ರಮಾಚರಣೆಗೆ ಬಂದಿತ್ತು.

ರೈತರು ಕೆಲಸ ಮಾಡುತ್ತಿದ್ದಾಗ ನಮಗಾದರೂ ಏನು ಕೆಲಸವೆಂದು ಒಬ್ಬೊಬ್ಬರು ಒಂದೊಂದು ಆಟದಲ್ಲಿ ತೊಡಗಿದ್ದರು. ನಂದನ ಕಲ್ಲು–ಹೆಂಟೆಗಳಿಂದ ಗುರಿಯಿಡುವುದನ್ನು ಕಲಿಯುತ್ತಿದ್ದ. ಆತನಿಗಿನ್ನೂ ವಿದ್ಯಾಭ್ಯಾಸಕ್ಕೆ ಸೇರಿಸುವ ವಯಸ್ಸಾಗಿರಲಿಲ್ಲ. ಆದರೆ, ವಿದ್ಯಾಭ್ಯಾಸದ ಒಂದು ಹಂತವನ್ನು ಮುಗಿಸಿದ್ದ ಶುದ್ಧೋದನರ ತಂಗಿ ಅಮಿತಾಳ ಮಗ ದೇವದತ್ತ ಬಿಲ್ಲು–ಬಾಣಗಳನ್ನು ಹಿಡಿದು ಅದರಲ್ಲಿ ಗುರಿ ಸಾಧಿಸಲು ಪ್ರಯತ್ನಿಸುತ್ತಿದ್ದ. ಸಿದ್ಧಾರ್ಥನಿಗೆ ಕುದುರೆ ಸವಾರಿಯಲ್ಲಿ ಅಪಾರ ಖುಷಿ. ತಂದೆಯೊಂದಿಗೆ ಒಂದು ಸುತ್ತು ಹೋಗಿ ಬಂದವನು, ಒಂದು ಕಡೆ ನೇಗಿಲನ್ನೂ ಹಿಡಿದು ಅರೆತಾಸು ಉಳುಮೆಯನ್ನೂ ಮಾಡಿದ. ದಿನನಿತ್ಯವೂ ಕೆಲಸ ಮಾಡದಿದ್ದುದರಿಂದ ಹಾಗೂ ಅಪರೂಪಕ್ಕೊಮ್ಮೆ ಹೀಗೆ ಉತ್ಸಾಹದಿಂದ ಕೆಲಸ ಮಾಡಿದ್ದರಿಂದ ಮಧ್ಯಾಹ್ನದ ವೇಳೆಗೇ ಸುಸ್ತಾಗಿ ನಮ್ಮಲ್ಲಿಗೆ ಹಿಂದಿರುಗಿದ್ದ. ಬಂದವನು ಊಟಕ್ಕೂ ಮೊದಲು ಸ್ವಲ್ಪ ಹೊತ್ತು ಧ್ಯಾನವನ್ನು ಅಭ್ಯಾಸ ಮಾಡಿ ಇನ್ನಷ್ಟು ಮೈಗೂಡಿಸಿಕೊಳ್ಳಬೇಕೆಂದು, ನಮ್ಮ ಮಾತು–ಶಬ್ದಗಳು ಕೇಳಿಸದಷ್ಟು ದೂರದಲ್ಲಿದ್ದ ಇನ್ನೊಂದು ಮರದಡಿಗೆ ಹೋಗಿ ಕುಳಿತ. ಸುತ್ತಮುತ್ತಲೂ ಸಾಕಷ್ಟು ಕಾಡು ಇದ್ದು ಗಿಳಿ, ಗೊರವಂಕದಂಥ ಪಕ್ಷಿಗಳು ನೆಲ ಉಳುವಾಗ ಹೊರಬರುವ ಸಣ್ಣಪುಟ್ಟ ಕೀಟ, ಹುಳುಗಳನ್ನು ಆಯ್ದುಕೊಂಡು ತಿನ್ನುತ್ತಿದ್ದವು. ಕಾಗೆ, ಹದ್ದಿನಂಥ ಪಕ್ಷಿಗಳು ದೂರದಿಂದಲೇ ಇಲಿ, ಹಾವುಗಳನ್ನು ಗುರಿಯಿರಿಸಿ ಎಗರಿಸಿಕೊಂಡು ಹೋಗುತ್ತಿದ್ದವು.

ದೇವದತ್ತ, ಸ್ವಲ್ಪ ದೂರದಲ್ಲಿ ಮರದ ಮೇಲೆ ಕುಳಿತಿದ್ದ, ಮರದಿಂದ ಮರಕ್ಕೆ ಹಾರುತ್ತಿದ್ದ ಪಕ್ಷಿಗಳನ್ನು ಗುರಿಯಿರಿಸಿ ಬಾಣ ಬಿಡುತ್ತಿದ್ದ. ಹಾಗೆ ಯತ್ನಿಸುತ್ತಿರುವಾಗ ಮರಕ್ಕಿಂತಲೂ ಸ್ವಲ್ಪ ಎತ್ತರದಲ್ಲಿ ಹಾರುತ್ತಿದ್ದ ಪಕ್ಷಿಯೊಂದಕ್ಕೆ ಗುರಿಯಿರಿಸಿ ಬಾಣಬಿಟ್ಟಿದ್ದ. ಅದರ ಚಲಿಸುವ ವೇಗ, ಬಾಣ ಚಲಿಸುವ ವೇಗವನ್ನು ನಿಖರವಾಗಿ ಲೆಕ್ಕ ಹಾಕಿ ಹೆದೆಯೇರಿಸಿದ್ದ. ಅವನ ಗುರಿ ತಪ್ಪಿರಲಿಲ್ಲ. ಅವನು ನಿರೀಕ್ಷಿಸಿದಂತೆಯೇ ಅದು ಪಕ್ಷಿಯನ್ನು ತಲುಪಿಯೇ ಬಿಟ್ಟಿತ್ತು. ಪೆಟ್ಟು ತಿಂದ ಪಕ್ಷಿಯು ಆಕಾಶದಲ್ಲಿ ಕೀರಲು ಧ್ವನಿಯಿಂದ ಚೀರುತ್ತ, ತನ್ನ ಶಕ್ತಿಯನ್ನೆಲ್ಲಾ ರೆಕ್ಕೆಗಳಿಗೆ ವರ್ಗಾಯಿಸಿ ಹಾರಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾ ಮರದ ಆಸರೆ ಪಡೆಯಲು ಅಷ್ಟು ದೂರ ಹಾರಿ ಹೋಗಿದ್ದು, ಕೊನೆಗೆ ತಾಳಲಾರದೇ ನೆಲಕ್ಕೆ ಬಿದ್ದಿತು. ಆದರೆ ಅದು ಬಿದ್ದದ್ದು ಮಾತ್ರ ಧ್ಯಾನಕ್ಕೆ ಕುಳಿತಿದ್ದ ಸಿದ್ಧಾರ್ಥನ ಮುಂದೆ! ಮಮ್ಮಲ ಮರುಗಿದ ಜೀವಪರ ನಿಲುವಿನ ಸಿದ್ಧಾರ್ಥ, ಆ ಪಕ್ಷಿಯನ್ನು ಎತ್ತಿಕೊಂಡು, ನೆಟ್ಟಿದ್ದ ಬಾಣವನ್ನು ಕಿತ್ತೊಗೆದು, ಸುರಿಯುತ್ತಿದ್ದ ರಕ್ತಕ್ಕೆ ತನ್ನ ವಸ್ತ್ರದ ಒಂದು ಭಾಗವನ್ನೇ ಹರಿದು ಕಟ್ಟಿ, ಮೆಲ್ಲಗೆ ಎದೆಗೊತ್ತಿಕೊಂಡು ಅದಕ್ಕೆ ಬೆಚ್ಚನೆಯ ಸುರಕ್ಷತೆಯ ಭಾವ ಮೂಡಿಸಿದ. ನಡುಗುತ್ತಿದ್ದ ಆ ಪಕ್ಷಿ ತಹಬಂದಿಗೆ ಬರುವ ವೇಳೆಗೆ, ಅಲ್ಲಿಗೆ ತನ್ನ ಬೇಟೆಯನ್ನು ಹುಡುಕುತ್ತಾ ಓಡೋಡಿ ಬಂದ ದೇವದತ್ತ, 'ಆ ಪಕ್ಷಿಯನ್ನು ನೋಡಿದೆಯಾ?' ಎಂದು ಸಿದ್ಧಾರ್ಥನನ್ನೇ ಕೇಳಿದ. ಆತ ಎದೆಗೊರಗಿಸಿಕೊಂಡಿದ್ದ ಪಕ್ಷಿಯನ್ನು ಕಂಡು, ಅದು ತನ್ನ ಬೇಟೆಯಾದ್ದರಿಂದ ಅದನ್ನು ತನಗೇ ನೀಡಬೇಕೆಂದು ಕೇಳಿದ. ಇಬ್ಬರ ನಡುವೆ ವಾಗ್ವಾದ ಶುರುವಾಯಿತು.

ಗದ್ದಲವನ್ನು ಕೇಳಿಸಿಕೊಂಡ ನಾವೂ ಅಲ್ಲಿಗೆ ಓಡಿದೆವು. ಇಬ್ಬರೂ ಆಗ ತಾನೇ ಕಲಿತಿದ್ದ ವಿದ್ಯೆಯ ಕಸರತ್ತುಗಳನ್ನೆಲ್ಲ ಪ್ರಯೋಗಿಸುತ್ತಿದ್ದರು. ದೇವದತ್ತ, ತಾನು ಬಾಣ ಹೊಡೆದು ಉರುಳಿಸಿರುವುದರಿಂದ ಅದು ತನ್ನ ಬೇಟೆಯೆಂದು ವಾದಿಸುತ್ತಿದ್ದರೆ, ಸಿದ್ಧಾರ್ಥ ತಾನು ಅದರ ಜೀವ ಉಳಿಸಿರುವುದರಿಂದ ಅದು ತನ್ನ ಸ್ವತ್ತು ಎಂದೂ